91

# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-49/2017/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 17/5/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ:
1) ಶ್ರೀ.ಆರ್.ಎನ್.ಓಬಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದೊಣ್ಣೆಹಳ್ಳಿ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.
2) ಶ್ರೀಮತಿ.ಓಂಕಾರಮ್ಮ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಕಲ್ಲೇದೇವರಪುರ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು,
3) ಶ್ರೀ.ಕೆ.ಟಿ.ಬಡಯ್ಯ, ಹಾಲಿ ಅಧ್ಯಕ್ಷರು, ಕಲ್ಲೇದೇವರಪುರ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು,
4) ಶ್ರೀ.ಕೆ.ಟಿ.ವೀರಸ್ವಾಮಿ, ಹಾಲಿ ಸದಸ್ಯರು, ಕಲ್ಲೇದೇವರಪುರ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು,
5) ಶ್ರೀ.ಎಸ್.ಹೆಚ್.ಹನುಮಂತಪ್ಪ, ಕಿರಿಯ ಇಂಜಿನಿಯರ್, ಶಾಖಾಧಿಕಾರಿ, ಗ್ರಾಮಪಂಚಾಯಿತಿ ಕಚೇರಿ, ಕಲ್ಲೇದೇವರಪುರ, ಪಿ.ಆರ್.ಇ.ಉಪ ವಿಭಾಗ, ಜಗಳೂರು, (ಹಾಲಿ ಪಿ.ಆರ್.ಇ. ಉಪವಿಭಾಗ, ಹರಪನಹಳ್ಳಿ),
6) ಶ್ರೀ.ಸಿ.ಯು.ಬಸವರಾಜು, ಕಿರಿಯ ಇಂಜಿನಿಯರ್, ಶಾಖಾಧಿಕಾರಿ, ಗ್ರಾಮಪಂಚಾಯಿತಿ ಕಚೇರಿ, ಕಲ್ಲೇದೇವರಪುರ, ಪಿ.ಆರ್.ಇ.ಉಪ ವಿಭಾಗ, ಜಗಳೂರು, (ಹಾಲಿ ಪಿ.ಆರ್.ಇ. ಉಪವಿಭಾಗ, ಹರಪನಹಳ್ಳಿ),
7) ಶ್ರೀ.ಎನ್.ಲಿಂಗರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಇ.ಉಪವಿಭಾಗ, ಜಗಳೂರು, (ಹಾಲಿ ಪಿ.ಆರ್.ಇ. ಉಪ ವಿಭಾಗ, ಚಿತ್ರದುರ್ಗ)
8) ಶ್ರೀ.ಯು.ಎಂ.ಗುರುಸ್ವಾಮಿ, 4ನೇ ದರ್ಜೆ ಗುತ್ತಿಗೆದಾರ, ದೇವೀಕೆರೆ ಗ್ರಾಮ, ಜಗಳೂರು ತಾಲ್ಲೂಕು,
9) ಶ್ರೀ.ತಿಪ್ಪೇಸ್ವಾಮಿ, 2ನೇ ದರ್ಜೆ ಗುತ್ತಿಗೆದಾರ, ಬಂಗಾರಕ್ಕನಗುಡ್ಡ ಗ್ರಾಮ ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, ಇವರ ವಿರುದ್ಧದ ನಡವಳಿ ಕುರಿತು.

******

1) ಮಾನ್ಯ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ದಾವಣಗೆರೆ ಲೋಕಾಯುಕ್ತ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ (1) ಶ್ರೀ.ಆರ್.ಎನ್.ಓಬಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದೊಣ್ಣೆಹಳ್ಳಿ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ,

(2) ಶ್ರೀಮತಿ.ಓಂಕಾರಮ್ಮ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಕಲ್ಲೇದೇವರಪುರ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು, (3) ಶ್ರೀ.ಕೆ.ಟಿ.ಬಡಯ್ಯ, ಹಾಲಿ ಅಧ್ಯಕ್ಷರು, ಕಲ್ಲೇದೇವರಪುರ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು, (4) ಶ್ರೀ.ಕೆ.ಟಿ.ವೀರಸ್ವಾಮಿ, ಹಾಲಿ ಸದಸ್ಯರು, ಕಲ್ಲೇದೇವರಪುರ ಗ್ರಾಮ ಪಂಚಾಯಿತಿ, ಜಗಳೂರು ತಾಲ್ಲೂಕು, (5) ಶ್ರೀ.ಎಸ್.ಹೆಚ್.ಹನುಮಂತಪ್ಪ, ಕಿರಿಯ ಇಂಜಿನಿಯರ್, ಶಾಖಾಧಿಕಾರಿ, ಗ್ರಾಮಪಂಚಾಯಿತಿ ಕಚೇರಿ, ಕಲ್ಲೇದೇವರಪುರ, ಪಿ.ಆರ್.ಇ.ಉಪ ವಿಭಾಗ, ಜಗಳೂರು, (ಹಾಲಿ ಪಿ.ಆರ್.ಇ. ಉಪವಿಭಾಗ, ಹರಪನಹಳ್ಳಿ), (6) ಶ್ರೀ.ಸಿ.ಯು.ಬಸವರಾಜು, ಕಿರಿಯ ಇಂಜಿನಿಯರ್, ಶಾಖಾಧಿಕಾರಿ, ಗ್ರಾಮಪಂಚಾಯಿತಿ ಕಚೇರಿ, ಕಲ್ಲೇದೇವರಪುರ, ಪಿ.ಆರ್.ಇ.ಉಪ ವಿಭಾಗ, ಜಗಳೂರು, (ಹಾಲಿ ಪಿ.ಆರ್.ಇ. ಉಪವಿಭಾಗ, ಹರಪನಹಳ್ಳಿ), (7) ಶ್ರೀ.ಎನ್.ಲಿಂಗರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಇ.ಉಪವಿಭಾಗ, ಜಗಳೂರು, (ಹಾಲಿ ಪಿ.ಆರ್.ಇ. ಉಪ ವಿಭಾಗ, ಚಿತ್ರದುರ್ಗ), (8) ಶ್ರೀ.ಯು.ಎಂ.ಗುರುಸ್ವಾಮಿ, 4ನೇ ದರ್ಜೆ ಗುತ್ತಿಗೆದಾರ, ದೇವೀಕೆರೆ ಗ್ರಾಮ, ಜಗಳೂರು ತಾಲ್ಲೂಕು, ಮತ್ತು (9) ಶ್ರೀ.ತಿಪ್ಪೇಸ್ವಾಮಿ, 2ನೇ ದರ್ಜೆ ಗುತ್ತಿಗೆದಾರ, ಬಂಗಾರಕ್ಕನಗುಡ್ಡ ಗ್ರಾಮ ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ 1 ರಿಂದ 9ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ವರದಿ ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ಎದುರುದಾರರ ವಿರುದ್ಧ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

2) **ಆಪಾದನೆಯ ಸಂಕ್ಷಿಪ್ತ ಸಾರಾಂಶ** :- 2011-12ನೇ ಸಾಲಿನಲ್ಲಿ ಕಲ್ಲೇದೇವರಪುರ ಗ್ರಾಮದ 6 ಕಾಮಗಾರಿಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಮಾಡಲು ಕ್ರಿಯಾ ಯೋಜನೆಯನ್ನು ತಯಾರಿಸಿ ಅವುಗಳಿಗೆ ಒಟ್ಟು ರೂ.15,50,000/- ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಕಾರ್ಯಾದೇಶವನ್ನು ಪಡೆದು ಸದರಿ ಕಾಮಗಾರಿಗಳನ್ನು ಕಾಟಾಚಾರಕ್ಕೆ ಅಲ್ಪಸ್ವಲ್ಪ ಜೆ.ಸಿ.ಬಿ.ಯಂತ್ರಗಳಿಂದ ಮಾಡಿಸಿ, ನಂತರ ಸದರಿ ಯೋಜನೆಯಲ್ಲಿ ಹಣ ತೆಗೆಯುವ ಸಲುವಾಗಿ ತಮ್ಮ ಮನಸೋ ಇಚ್ಛೆ ಎನ್.ಎಂ.ಆರ್.ಗಳನ್ನು ತಯಾರಿಸಿ ಅವುಗಳಿಗೆ ಖೊಟ್ಟಿ ಸಹಿಗಳನ್ನು ಸೃಷ್ಟಿಸಿ ಗ್ರಾಮದಲ್ಲಿ ಇಲ್ಲದೇ ಇರುವವರ, ಕೂಲಿ ಕೆಲಸವನ್ನು ಮಾಡದೇ ಇರುವವರ ಹಾಗೂ ಸತ್ತವರ ಹೆಸರುಗಳನ್ನು ಬಳಸಿಕೊಂಡು ಎನ್.ಎಂ.ಆರ್.ಪಟ್ಟಿಗಳನ್ನು ತಯಾರಿಸಿ ನಂತರ ಸದರಿ ಕಾಮಗಾರಿಗಳ ಬಾಬ್ತು ಹಣವನ್ನು ಬ್ಯಾಂಕಿಗೆ ಜಮಾ ಮಾಡಿ ಕೂಲಿಕಾರರಿಂದ ಅವರಿಗೆ ಅಲ್ಪಸ್ವಲ್ಪ ಖರ್ಚಿಗೆ ಹಣ ಕೊಟ್ಟು ಉಳಿದ ಹಣನ್ನು ಬಿಡಿಸಿಕೊಂಡು ಭ್ರಷ್ಟಾಚಾರ ಮಾಡಿರುತ್ತಾರೆಂದು ಶ್ರೀಮತಿ.ಕೆ.ಬಿ.ಜಯ್ಯಮ್ಮ @ ಜಯಲಕ್ಷ್ಮಿ ಕೋಂ ತಿಪ್ಪೇಸ್ವಾಮಿ, ಕಲ್ಲೇದೇವರಪುರ ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಮತ್ತು ಇತರರು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಆಪಾದನೆ ಮಾಡಿದ ಕಾರಣ ದಾವಣಗೆರೆ ಲೋಕಾಯುಕ್ತ ಪೊಲೀಸರು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡು

ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ಸದರಿ ದೋಷಾರೋಪಣ ಪಟ್ಟಿಯಲ್ಲಿ ಈ ಕೆಳಗಿನಂತೆ ಆಪಾದನೆಗಳು ಇರುವುದು ಕಂಡುಬರುತ್ತದೆ.

ಎ) 1ನೇ ಎದುರುದಾರರು ಎನ್.ಆರ್.ಇ.ಜಿ. ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಮತ್ತು ಹಣ ಬಟವಾಡೆ ಮಾಡುವ ಅಧಿಕಾರಿಯಾಗಿದ್ದು, 6 ಕಾಮಗಾರಿಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಮಾಡಲು ಯೋಜನೆಯನ್ನು ಹಾಕಿಕೊಂಡು ಅವುಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಕಾರ್ಯನಿರ್ವಾಹಕ ಅಧಿಕಾರಿ, ಜಗಳೂರು ತಾಲ್ಲೂಕು ಇವರಿಂದ ಕಾರ್ಯಾದೇಶವನ್ನು ಪಡೆದುಕೊಂಡಿರುತ್ತಾರೆ. ನಂತರ ಕಾಮಗಾರಿಗಳನ್ನು ಕಾಟಾಚಾರಕ್ಕೆ ಅಲ್ಪಸ್ವಲ್ಪ ಜೆ.ಸಿ.ಬಿ.ಯಂತ್ರಗಳಿಂದ ಮಾಡಿಸಿ, ಕಾಮಗಾರಿಯಲ್ಲಿ ಹಣ ತೆಗೆಯುವ ಸಲುವಾಗಿ ಕೂಲಿಕಾರರಿಗೆ ಜಾರಿ ಮಾಡಬೇಕಾದ ಫಾರಂ ನಂ.8ನ್ನು ತಮ್ಮ ಮನಸೋ ಇಚ್ಛೆ ತಯಾರಿಸಿಕೊಂಡು, ಕೆಲಸ ಮಾಡದೇ ಇರುವವರ, ಗ್ರಾಮದಲ್ಲಿ ಇಲ್ಲದೇ ಇರುವವರ, ಸತ್ತವರ ಮತ್ತು ಅಪ್ರಾಪ್ತ ವಯಸ್ಸಿನವರ ಹೆಸರುಗಳನ್ನು ಸೇರಿಸಿಕೊಂಡು ಅವರ ಸಹಿಗಳನ್ನು ಫೋರ್ಜರಿ ಮಾಡಿ ಖೊಟ್ಟಿ ಎನ್.ಎಂ.ಆರ್.ಗಳನ್ನು ಸೃಷ್ಟಿಸಿರುತ್ತಾರೆ. ಖೊಟ್ಟಿ ಎನ್.ಎಂ.ಆರ್.ಗಳನ್ನು ನೈಜವೆಂದು ಉಪಯೋಗಿಸಿ ಕೂಲಿಕಾರರ ಬಾಬ್ತು ಹಣವನ್ನು ತೆಗೆಯುವ ಸಲುವಾಗಿ ಅನುಕೂಲವಾಗುವವರ ಮತ್ತು ರೂಢಿಗತ ವ್ಯಕ್ತಿಗಳ ಖಾತೆಗಳಿಗೆ ಹಣ ಜಮಾ ಮಾಡಿ ಅವರ ಖರ್ಚಿಗೆ ಅಲ್ಪಸ್ವಲ್ಪ ಹಣ ಕೊಟ್ಟು ಅವರಿಂದ ಹಣ ಹಿಂಪಡೆಯುವ ಚೀಟಿಗೆ ಸಹಿಗಳನ್ನು ಪಡೆದು ಜಗಳೂರು ತಾಲ್ಲೂಕು ತೋರಣಘಟ್ಟೆ ಗ್ರಾಮದ ಕೃಷ್ಣ ಪ್ರಗತಿ ಗ್ರಾಮೀಣ ಬ್ಯಾಂಕ್ ಇಲ್ಲಿಂದ ಏಜೆಂಟರುಗಳ ಮುಖಾಂತರ ಹಣವನ್ನು ಬಿಡಿಸಿಕೊಂಡು ಭ್ರಷ್ಟಾಚಾರ ಮಾಡಿದ್ದಲ್ಲದೆ, ಕಾಮಗಾರಿಗಳಲ್ಲಿ ಕಚ್ಚಾ ಸಾಮಗ್ರಿಗಳನ್ನು ಪೂರೈಸಿದಂತೆ ಅನುಕೂಲವಿರುವ ಗುತ್ತಿಗೆದಾರರ ಹೆಸರಿನಲ್ಲಿ ಎಫ್ ಅಂಡ್ ಎಫ್ ಬಿಲ್ ಮಂಜೂರು ಮಾಡಿ ಉದ್ಯೋಗ ಖಾತ್ರಿ ಯೋಜನೆಯ ನಿಯಮಗಳನ್ನು ಉಲ್ಲಂಘಿಸಿದ್ದು, ಅಧಿಕಾರ ದುರುಪಯೋಗ ಪಡಿಸಿಕೊಂಡು ಸರ್ಕಾರದ ಬೊಕ್ಕಸಕ್ಕೆ ಒಟ್ಟು ರೂ.14,58,215/- ಗಳ ನಷ್ಟವುಂಟುಮಾಡಿರುತ್ತಾರೆ.

ಬಿ) 2ನೇ ಎದುರುದಾರರು ಎನ್.ಆರ್.ಇ.ಜಿ. ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಮತ್ತು ಹಣ ಬಟವಾಡೆ ಮಾಡುವ ಅಧಿಕಾರಿಯಾಗಿದ್ದು, 6 ಕಾಮಗಾರಿಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಮಾಡಲು ಯೋಜನೆಯನ್ನು ಹಾಕಿಕೊಂಡು ಅವುಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಕಾರ್ಯನಿರ್ವಾಹಕ ಅಧಿಕಾರಿ, ಜಗಳೂರು ತಾಲ್ಲೂಕು ಇವರಿಂದ ಕಾರ್ಯಾದೇಶವನ್ನು ಪಡೆದುಕೊಂಡಿರುತ್ತಾರೆ. ನಂತರ ಕಾಮಗಾರಿಗಳನ್ನು ಕಾಟಾಚಾರಕ್ಕೆ ಅಲ್ಪಸ್ವಲ್ಪ ಜೆ.ಸಿ.ಬಿ.ಯಂತ್ರಗಳಿಂದ ಮಾಡಿಸಿ, ಕಾಮಗಾರಿಯಲ್ಲಿ ಹಣ ತೆಗೆಯುವ ಸಲುವಾಗಿ ಕೂಲಿಕಾರರಿಗೆ ಜಾರಿ ಮಾಡಬೇಕಾದ ಫಾರಂ ನಂ.8ನ್ನು ತಮ್ಮ ಮನಸೋ ಇಚ್ಛೆ

94



ತಯಾರಿಸಿಕೊಂಡು, ಕೆಲಸ ಮಾಡದೇ ಇರುವವರ, ಗ್ರಾಮದಲ್ಲಿ ಇಲ್ಲದೇ ಇರುವವರ, ಸತ್ತವರ ಮತ್ತು ಅಪ್ರಾಪ್ತ ವಯಸ್ಸಿನವರ ಹೆಸರುಗಳನ್ನು ಸೇರಿಸಿಕೊಂಡು ಅವರ ಸಹಿಗಳನ್ನು ಫೋರ್ಜರಿ ಮಾಡಿ ಖೊಟ್ಟಿ ಎನ್.ಎಂ.ಆರ್.ಗಳನ್ನು ಸೃಷ್ಟಿಸಿರುತ್ತಾರೆ. ಖೊಟ್ಟಿ ಎನ್.ಎಂ.ಆರ್.ಗಳನ್ನು ನೈಜವೆಂದು ಉಪಯೋಗಿಸಿ ಕೂಲಿಕಾರರ ಬಾಬ್ತು ಹಣವನ್ನು ತೆಗೆಯುವ ಸಲುವಾಗಿ ಅನುಕೂಲವಾಗುವವರ ಮತ್ತು ರೂಢಿಗತ ವ್ಯಕ್ತಿಗಳ ಖಾತೆಗಳಿಗೆ ಹಣ ಜಮಾ ಮಾಡಿ ಅವರ ಖರ್ಚಿಗೆ ಅಲ್ಪಸ್ವಲ್ಪ ಹಣ ಕೊಟ್ಟು ಅವರಿಂದ ಹಣ ಹಿಂಪಡೆಯುವ ಚೀಟಿಗೆ ಸಹಿಗಳನ್ನು ಪಡೆದು ಜಗಳೂರು ತಾಲ್ಲೂಕು ತೋರಣಘಟ್ಟೆ ಗ್ರಾಮದ ಕೃಷ್ಣ ಪ್ರಗತಿ ಗ್ರಾಮೀಣ ಬ್ಯಾಂಕ್ ಇಲ್ಲಿಂದ ಏಜೆಂಟರುಗಳ ಮುಖಾಂತರ ಹಣವನ್ನು ಬಿಡಿಸಿಕೊಂಡು ಭ್ರಷ್ಟಾಚಾರ ಮಾಡಿದ್ದಲ್ಲದೆ, ಕಾಮಗಾರಿಗಳಲ್ಲಿ ಕಚ್ಚಾ ಸಾಮಗ್ರಿಗಳನ್ನು ಪೂರೈಸಿದಂತೆ ಅನುಕೂಲವಿರುವ ಗುತ್ತಿಗೆದಾರರ ಹೆಸರಿನಲ್ಲಿ ಎಫ್ ಅಂಡ್ ಎಫ್ ಬಿಲ್ ಮಂಜೂರು ಮಾಡಿ ಉದ್ಯೋಗ ಖಾತ್ರಿ ಯೋಜನೆಯ ನಿಯಮಗಳನ್ನು ಉಲ್ಲಂಘಿಸಿದ್ದು, ಅಧಿಕಾರ ದುರುಪಯೋಗ ಪಡಿಸಿಕೊಂಡು ಸರ್ಕಾರದ ಬೊಕ್ಕಸಕ್ಕೆ ಒಟ್ಟು ರೂ.14,58,215/- ಗಳ ನಷ್ಟವುಂಟುಮಾಡಿರುತ್ತಾರೆ.

ಸಿ) 3ನೇ ಎದುರುದಾರರು 2011-12ನೇ ಸಾಲಿನಲ್ಲಿ ಕಲ್ಲೇದೇವರಪುರ ಗ್ರಾಮಪಂಚಾಯಿತಿಯ ಸದಸ್ಯರಾಗಿದ್ದು, 1 ಮತ್ತು 2ನೇ ಎದುರುದಾರರೊಂದಿಗೆ ಸೇರಿಕೊಂಡು ಕಾಮಗಾರಿಗಳನ್ನು ಅಲ್ಪಸ್ವಲ್ಪ ಕಾಟಾಚಾರಕ್ಕೆ ಜೆ.ಸಿ.ಬಿ.ಯಂತ್ರಗಳಿಂದ ಮಾಡಿಸಿ, ನಂತರ ಪ್ರಕರಣದ 6 ಕಾಮಗಾರಿಗಳಲ್ಲಿ ಅನಾಮಧೇಯರ ಹೆಸರಿನಲ್ಲಿ ಸಹಿ ಮಾಡಿ ಖೊಟ್ಟಿ ಎನ್.ಎಂ.ಆರ್. ತಯಾರಿಸಿ, ಅದನ್ನು ನೈಜವೆಂದು ಉಪಯೋಗಿಸಿ, ನಂತರ ಕೂಲಿಕಾರರ ಬಾಬ್ತು ಹಣವನ್ನು ತೆಗೆಯುವ ಸಲುವಾಗಿ ಅನುಕೂಲವಾಗುವವರ ಮತ್ತು ರೂಢಿಗತ ವ್ಯಕ್ತಿಗಳ ಖಾತೆಗಳಿಗೆ ಹಣ ಜಮಾ ಮಾಡಿಸಿ ಅವರಿಂದ ಹಣ ಹಿಂಪಡೆಯುವ ಚೀಟಿಗೆ ಸಹಿಗಳನ್ನು ಪಡೆದು ಜಗಳೂರು ತಾಲ್ಲೂಕು ತೋರಣಘಟ್ಟೆ ಗ್ರಾಮದ ಕೃಷ್ಣ ಪ್ರಗತಿ ಗ್ರಾಮೀಣ ಬ್ಯಾಂಕಿನಿಂದ ಹಣವನ್ನು ಖಾಸಗಿ ಏಜೆಂಟರುಗಳಿಂದ ಬಿಡಿಸಿಕೊಂಡು ಅವರಿಗೆ ಅಲ್ಪಸ್ವಲ್ಪ ಖರ್ಚಿಗೆ ಹಣ ಕೊಟ್ಟು ಉಳಿದ ಹಣವನ್ನು ತೆಗೆದುಕೊಂಡು ಭ್ರಷ್ಟಾಚಾರ ಮಾಡಿರುತ್ತಾರೆ.

ಡಿ) 4ನೇ ಎದುರುದಾರರು 2011-12ನೇ ಸಾಲಿನಲ್ಲಿ ನಿಮ್ಮ ಜಮೀನು ರಿ.ಸ.ನಂ.4 ರಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿಯನ್ನು ಮಾಡುವಂತೆ ಗ್ರಾಮಪಂಚಾಯಿತಿ ವತಿಯಿಂದ ಕ್ರಿಯಾ ಯೋಜನೆಯನ್ನು ತಯಾರಿಸಿಕೊಂಡು ಸದರಿ ಕಾಮಗಾರಿಯನ್ನು ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಮಾಡುವ ಕುರಿತು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದುಕೊಂಡಿರುತ್ತಾರೆ. ಈಗಾಗಲೇ ನಿಮ್ಮ ಜಮೀನಿನಲ್ಲಿ ಕಲ್ಲು ಚಪ್ಪಡಿಗಳನ್ನು ಹಾಕಿ ಕೃಷಿ ಹೊಂಡ ನಿರ್ಮಾಣ ಮಾಡಿಕೊಂಡಿರುವುದಕ್ಕೆ ಸದರಿ ಕಾಮಗಾರಿಗೆ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಹಣ ತೆಗೆಯುವ ಸಂಬಂಧ 1 ರಿಂದ 3ನೇ ಎದುರುದಾರರೊಂದಿಗೆ ಸಂಚು ಮಾಡಿ ಈಗಾಗಲೇ ಮಾಡಿರುವ ಕೃಷಿ ಹೊಂಡ ನಿರ್ಮಾಣ ಕಾಮಗಾರಿಯನ್ನು ಉದ್ಯೋಗ

ಖಾತ್ರಿ ಯೋಜನೆಯಡಿ ಮಾಡಿದಂತೆ ಖೊಟ್ಟಿ ಎನ್.ಎಂ.ಆರ್.ಸೃಷ್ಟಿಸಿ ನಿಮಗೆ ಬೇಕಾದ ಕೂಲಿಕಾರರ ಖಾತೆಗಳಿಗೆ ಹಣ ಜಮಾ ಮಾಡಿ ಕೂಲಿಕಾರರನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ಅವರಿಂದ ಹಣ ಹಿಂಪಡೆಯುವ ಚೀಟಿಗೆ ಸಹಿ ಪಡೆದು ಅವರಿಗೆ ಸಲ್ಪಸ್ವಲ್ಪ ಹಣ ಕೊಟ್ಟು ಉಳಿದ ಹಣವನ್ನು ತೆಗೆದುಕೊಂಡು ಅಧಿಕಾರ ದುರುಪಯೋಗ ಪಡಿಸಿಕೊಂಡು ಸರ್ಕಾರದ ಹಣವನ್ನು ದುರ್ಬಳಕೆ ಮಾಡಿರುತ್ತಾರೆ.

ಇ) 5ನೇ ಎದುರುದಾರರು ಪ್ರಕರಣದ 6 ಕಾಮಗಾರಿಗಳ ಪೈಕಿ ಶ್ರೀ.ನಾಗೇಂದ್ರಪ್ಪ ಬಿನ್ ತಿಪ್ಪಯ್ಯ ಇವರ ಜಮೀನಿನಲ್ಲಿ ಮಾಡಿದ ಏರಿ ಅಭಿವೃದ್ಧಿ ಕಾಮಗಾರಿಯನ್ನು ಹೊರತು ಪಡಿಸಿ ಉಳಿದ 5 ಕಾಮಗಾರಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಕಾಮಗಾರಿಗಳನ್ನು ಪೂರ್ಣವಾಗಿ ಮಾಡದಿದ್ದರೂ ಖೊಟ್ಟಿ ಎಂ.ಬಿ.ಅಳತೆಗಳನ್ನು ದಾಖಲಿಸಿ ವರ್ಕ್ ಕಂಪ್ಲೀಷನ್ ಸರ್ಟಿಫಿಕೇಟ್‌ಗೆ ಸಹಿ ಹಾಕಿರುತ್ತಾರೆ. ಕಾಮಗಾರಿಯು ಎನ್.ಆರ್.ಇ.ಜಿ.ಇ. ರೂಪುರೇಶೆಯಂತೆ ಮಾಡದಿದ್ದರೂ ಕಚ್ಚಾ ಸಾಮಗ್ರಿಗಳನ್ನು ಪೂರೈಸಿದ ಬಾಬ್ತು ಹಣವನ್ನು ಸಂಬಂಧಿಸಿದ ಗುತ್ತಿಗೆದಾರರಿಗೆ ಕೊಡುವ ಸಲುವಾಗಿ ಎಫ್ ಅಂಡ್ ಎಫ್ ಬಿಲ್ ತಯಾರಿಸಿಕೊಟ್ಟಿರುತ್ತಾರೆ. ಅಂದಾಜು ಪಟ್ಟಿಯಲ್ಲಿರುವಂತೆ ಉದ್ಯೋಗ ಖಾತ್ರಿ ನಿಯಮದಂತೆ ಕಾಮಗಾರಿಗಳು ನಡೆಯದಿದ್ದರೂ ಸಹ ವರ್ಕ್ ಕಂಪ್ಲೀಷನ್ ಸರ್ಟಿಫಿಕೇಟ್‌ಗೆ ಸಹಿ ಹಾಕಿ ಉಳಿದ ಆರೋಪಿತರೊಂದಿಗೆ ಸೇರಿಕೊಂಡು ಸಂಚು ಮಾಡು ಉದ್ಯೋಗ ಖಾತ್ರಿ ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಳ್ಳಲು ಕಾರಣರಾಗಿರುತ್ತಾರೆ.

ಎಫ್) 6ನೇ ಎದುರುದಾರರು ಶ್ರೀ.ನಾಗೇಂದ್ರಪ್ಪ ಬಿನ್ ತಿಪ್ಪಯ್ಯ ಇವರ ಜಮೀನಿನಲ್ಲಿ ಮಾಡಿದ ಏರಿ ಅಭಿವೃದ್ಧಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಕಾಮಗಾರಿಗಳನ್ನು ಪೂರ್ಣವಾಗಿ ಮಾಡದಿದ್ದರೂ ಖೊಟ್ಟಿ ಎಂ.ಬಿ.ಅಳತೆಗಳನ್ನು ದಾಖಲಿಸಿ ವರ್ಕ್ ಕಂಪ್ಲೀಷನ್ ಸರ್ಟಿಫಿಕೇಟ್‌ಗೆ ಸಹಿ ಹಾಕಿರುತ್ತಾರೆ. ಕಾಮಗಾರಿಯು ಎನ್.ಆರ್.ಇ.ಜಿ.ಇ. ರೂಪುರೇಶೆಯಂತೆ ಮಾಡದಿದ್ದರೂ ಕಚ್ಚಾ ಸಾಮಗ್ರಿಗಳನ್ನು ಪೂರೈಸಿದ ಬಾಬ್ತು ಹಣವನ್ನು ಸಂಬಂಧಿಸಿದ ಗುತ್ತಿಗೆದಾರರಿಗೆ ಕೊಡುವ ಸಲುವಾಗಿ ಎಫ್ ಅಂಡ್ ಎಫ್ ಬಿಲ್ ತಯಾರಿಸಿಕೊಟ್ಟಿರುತ್ತಾರೆ. ಅಂದಾಜು ಪಟ್ಟಿಯಲ್ಲಿರುವಂತೆ ಉದ್ಯೋಗ ಖಾತ್ರಿ ನಿಯಮದಂತೆ ಕಾಮಗಾರಿಗಳು ನಡೆಯದಿದ್ದರೂ ಸಹ ವರ್ಕ್ ಕಂಪ್ಲೀಷನ್ ಸರ್ಟಿಫಿಕೇಟ್‌ಗೆ ಸಹಿ ಹಾಕಿ ಉಳಿದ ಆರೋಪಿತರೊಂದಿಗೆ ಸೇರಿಕೊಂಡು ಸಂಚು ಮಾಡು ಉದ್ಯೋಗ ಖಾತ್ರಿ ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಳ್ಳಲು ಕಾರಣರಾಗಿರುತ್ತಾರೆ.

ಜಿ) 7ನೇ ಎದುರುದಾರರು ಪ್ರಕರಣದ 6 ಕಾಮಗಾರಿಗಳಿಗೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಾಡುವ ಕುರಿತು ಮಾಡಿದ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿರುತ್ತಾರೆ. 5 ಮತ್ತು 6ನೇ ಎದುರುದಾರರು ಸ್ಥಳದಲ್ಲಿ ಕಾಮಗಾರಿ ಮಾಡಿದ ಬಗ್ಗೆ ಎಂ.ಬಿ. ಅಳತೆಯನ್ನು ದಾಖಲಿಸಿದಾಗ, ಸ್ಥಳದಲ್ಲಿ ಕಾಮಗಾರಿಯು ಅಂದಾಜು ಪಟ್ಟಿಯಂತೆ ಮತ್ತು ಎನ್.ಆರ್.ಇ.ಜಿ.ಎ.

96



ರೂಪುರೇಶೆಯಂತೆ ನಡೆಯದಿದ್ದರೂ ಉಳಿದ ಆರೋಪಿತರೊಂದಿಗೆ ಸಂಚು ಮಾಡಿ ಕಾಮಗಾರಿಗಳು ಸ್ಥಳದಲ್ಲಿ ಸಮರ್ಪಕವಾಗಿ ನಡೆಯದಿದ್ದರೂ ನಿರ್ಲಕ್ಷ್ಯತನದಿಂದ 5 ಮತ್ತು 6ನೇ ಎದುರುದಾರರು ದಾಖಲು ಮಾಡಿದ ಎಂ.ಬಿ.ಅಳತೆಗೆ ಮೇಲು ರುಜು ಹಾಕಿ ಉದ್ಯೋಗ ಖಾತ್ರಿ ಯೋಜನೆಯ ಹಣ ರೂ.14,58,215/- ದುರ್ಬಳಕೆಯಾಗಲು ಕಾರಣರಾಗಿರುತ್ತಾರೆ.

ಹೆಚ್) 8ನೇ ಎದುರುದಾರರು ಪ್ರಕರಣದ ಕಾಮಗಾರಿಗಳ ಪೈಕಿ ಶ್ರೀ.ನಾಗೇಂದ್ರಪ್ಪ ಬಿನ್ ತಿಪ್ಪಯ್ಯ ಇವರ ಜಮೀನಿನಲ್ಲಿ ಮಾಡಿದ ಏರಿ ಅಭಿವೃದ್ಧಿ ಕಾಮಗಾರಿಯನ್ನು ಹೊರತು ಪಡಿಸಿ ಉಳಿದ 5 ಕಾಮಗಾರಿಗಳಲ್ಲಿ ಎಫ್ ಅಂಡ್ ಎಫ್ ಬಿಲ್‌ಗಳನ್ನು ಪಡೆದುಕೊಂಡಿರುತ್ತಾರೆ. ಕಾಮಗಾರಿಗಳಿಗೆ ಗ್ರಾವಲ್, ಇತರೆ ಕಚ್ಚಾ ಸಾಮಗ್ರಿಗಳನ್ನು ಪೂರೈಸಿರುವುದಾಗಿ ಬಿಲ್ ಪಡೆದಿರುತ್ತೀರಿ. ಸ್ಥಳದಲ್ಲಿ ಕಾಮಗಾರಿಗಳು ಸರಿಯಾಗಿ ನಡೆಯದಿದ್ದರೂ ಸಹ ಕಚ್ಚಾ ಸಾಮಗ್ರಿಗಳ ಬಾಬ್ತು ಉದ್ಯೋಗ ಖಾತ್ರಿ ಯೋಜನೆಯ ಹಣ ರೂ.5,02,331/- ಗಳನ್ನು ಎಫ್ ಅಂಡ್ ಎಫ್ ಬಿಲ್ ರೂಪದಲ್ಲಿ ಪಡೆದು ಸರ್ಕಾರದ ಹಣವನ್ನು ದುರ್ಬಳಕೆ ಮಾಡಿಕೊಂಡು ಸರ್ಕಾರಕ್ಕೆ ವಂಚನೆ ಮಾಡಿರುತ್ತಾರೆ.

ಐ) 9ನೇ ಎದುರುದಾರರು ಪ್ರಕರಣದ ಕಾಮಗಾರಿಗಳ ಪೈಕಿ ಶ್ರೀ.ನಾಗೇಂದ್ರಪ್ಪ ಬಿನ್ ತಿಪ್ಪಯ್ಯ ಇವರ ಜಮೀನಿನಲ್ಲಿ ಮಾಡಿದ ಏರಿ ಅಭಿವೃದ್ಧಿ ಕಾಮಗಾರಿ ಸಂಬಂಧ ಎಫ್ ಅಂಡ್ ಎಫ್ ಬಿಲ್‌ಗಳನ್ನು ಪಡೆದುಕೊಂಡಿರುತ್ತಾರೆ. ಕಾಮಗಾರಿಗಳಿಗೆ ಗ್ರಾವಲ್, ರಿವೆಟ್‌ಮೆಂಟ್‌ಗೆ ಕಲ್ಲುಗಳನ್ನು ಪೂರೈಸಿರುವುದಾಗಿ ಬಿಲ್ ಪಡೆದಿರುತ್ತಾರೆ. ಸ್ಥಳದಲ್ಲಿ ಕಾಮಗಾರಿಗಳು ಸರಿಯಾಗಿ ನಡೆಯದಿದ್ದರೂ ಸಹ ಕಚ್ಚಾ ಸಾಮಗ್ರಿಗಳ ಬಾಬ್ತು ಉದ್ಯೋಗ ಖಾತ್ರಿ ಯೋಜನೆಯ ಹಣ ರೂ.74,934/- ಗಳನ್ನು ಎಫ್ ಅಂಡ್ ಎಫ್ ಬಿಲ್ ರೂಪದಲ್ಲಿ ಪಡೆದು ಸರ್ಕಾರದ ಹಣವನ್ನು ದುರ್ಬಳಕೆ ಮಾಡಿಕೊಂಡು ಸರ್ಕಾರಕ್ಕೆ ವಂಚನೆ ಮಾಡಿರುತ್ತಾರೆ.

ಜೆ) ಸಾಕ್ಷಿದಾರರ ಹೇಳಿಕೆಗಳು, ದೂರು ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳನ್ನು ಪ್ರಕರಣದಲ್ಲಿ ಹಾಜರು ಪಡಿಸಿದ್ದು, ಅವೂ ಕೂಡ ಎದುರುದಾರರು ಸತತವಾದ ದುರ್ನಡತೆ ಎಸಗಿರುವುದನ್ನು ತೋರಿಸುತ್ತದೆ.

3) ಈ ಮೇಲ್ಕಂಡ ಅಂಶ ಮತ್ತು ಹಾಜರು ಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ 1 ರಿಂದ 9ನೇ ಎದುರುದಾರರು ಪ್ರಕರಣದ 6 ಕಾಮಗಾರಿಗಳನ್ನು ಜೆ.ಸಿ.ಬಿ.ಯಂತ್ರಗಳಿಂದ ಮಾಡಿಸಿ ಕೂಲಿಕಾರರಿಂದ ಕಾಮಗಾರಿಗಳನ್ನು ಮಾಡಿಸಿದಂತೆ ದಾಖಲೆಗಳನ್ನು ಸೃಷ್ಟಿಸಿ, ಕೂಲಿ ಹಣವನ್ನು ಕೂಲಿಕಾರರ ಖಾತೆಗೆ ಜಮಾ ಮಾಡಿ, ಅವರಿಗೆ ಖರ್ಚಿಗೆಂದು ಸ್ವಲ್ಪ ಹಣವನ್ನು ಕೊಟ್ಟು ಉಳಿದ ಹಣವನ್ನು ಅವ್ಯವಹಾರ ಮಾಡಿ ಎನ್.ಆರ್.ಇ.ಜಿ.ಯ. ಕಾಯ್ದೆಯ ರೂಪುರೇಷೆಗಳನ್ನು ಉಲ್ಲಂಘನೆ ಮಾಡಿ, ಕಾಮಗಾರಿಯನ್ನು ಪೂರ್ಣವಾಗಿ ಮಾಡದೆ, ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ, ಯೋಜನೆಯ ಹಣ ರೂ.14,58,215/- ಗಳ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಕಂಡುಬರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಇಲಾಖಾ

ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, ಎದುರುದಾರರು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

4) ನಂತರ, 1 ರಿಂದ 9ನೇ ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳುವ ಸಂಬಂಧ, ಶಿಸ್ತು ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ವರದಿ ಕಳುಹಿಸಬಾರದು ಎಂಬ ಬಗ್ಗೆ ಕಾರಣಗಳನ್ನು ಕೇಳಲಾಯಿತು. 1 ರಿಂದ 9ನೇ ಎದುರುದಾರರು ತನಿಖಾ ವರದಿಯಲ್ಲಿ ಕಾಣಿಸಿದ ಸಂಗತಿಗಳನ್ನು ನಿರಾಕರಿಸಿ, ಆಕ್ಷೇಪಣೆಯಲ್ಲಿ ನೀಡಿರುವ ಕಾರಣಗಳಿಗಾಗಿ ತಮ್ಮ ವಿರುದ್ಧದ ತನಿಖೆಯನ್ನು ಮುಕ್ತಾಯಗೊಳಿಸಬೇಕೆಂದು ಕೋರಿದ್ದಾರೆ. ಆದರೆ, 1 ರಿಂದ 9ನೇ ಎದುರುದಾರರು ಆಕ್ಷೇಪಣೆಯಲ್ಲಿ ನೀಡಿರುವ ಕಾರಣಗಳು ಸೂಕ್ತ ಅಥವಾ ಸಮಾಧಾನಕಾರಕವಾಗಿರುವುದಿಲ್ಲ.

5) 1 ಮತ್ತು 5 ರಿಂದ 7ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, 1 ಮತ್ತು 5 ರಿಂದ 7ನೇ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಹಾಗೂ 2 ರಿಂದ 4ನೇ ಎದುರುದಾರರು ಜನಪ್ರತಿನಿಧಿಗಳು ಹಾಗೂ 8 ಮತ್ತು 9ನೇ ಎದುರುದಾರರು ಗುತ್ತಿಗೆದಾರರಾಗಿದ್ದು, ಅವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43ಎ ರನ್ವಯ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

6) ಅಲ್ಲದೆ ಈ ಎದುರುದಾರರು ತಮ್ಮ ಕರ್ತವ್ಯ ಲೋಪದಿಂದ ಸರ್ಕಾರದ ಬೊಕ್ಕಸಕ್ಕೆ ಒಟ್ಟು ರೂ.14,58,215/- ಗಳ ನಷ್ಟ ಉಂಟು ಮಾಡಿರುವುದರಿಂದ, ಸದರಿ ಹಣವನ್ನು 1 ರಿಂದ 9ನೇ ಎದುರುದಾರರಿಂದ ವಸೂಲು ಮಾಡಬೇಕಾಗಿದೆ. ಈ ಹಣವನ್ನು ಸದರಿಯವರಿಂದ ವಸೂಲು ಮಾಡಲು ಹಾಗೂ 2 ರಿಂದ 4ನೇ ಎದುರುದಾರರು ಜನಪ್ರತಿನಿಧಿಗಳು ಹಾಗೂ 8 ಮತ್ತು 9ನೇ ಎದುರುದಾರರು ಗುತ್ತಿಗೆದಾರರಾಗಿದ್ದು, ಸದರಿಯವರ ವಿರುದ್ಧ ಪಂಚಾಯತ್ ರಾಜ್ ಕಾಯಿದೆಯನ್ವಯ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ಆದೇಶಿಸಲು ಶಿಫಾರಸ್ಸು ಮಾಡಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(4) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

17/5/17.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.